ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ
"ಅಭಿವೃದ್ಧಿ ಭವನ" ಐವಾನ-ಎ-ಶಾಹಿ, ಕಲಬುರಗಿ-585102
ದೂರವಾಣಿ: (08472) - 256767,239556,255564, ಫ್ಯಾಕ್ಸ್ :(08472) 227527
Email:hkabdgulb@gmail.com, hkrdbklb@gmail.com
Website: hkrdb.kar.nic.in

ಸಂಖ್ಯೆ:ಹೈಕಪ್ರಅಮಂ/ಯೋಶಾ/ಸುತ್ತೋಲೆ/19/2017-18 /1945 ದಿನಾಂಕ: 22-08-2018 23

: : ಸುತ್ತೋಲೆ-5 : :

ವಿಷಯ : ಹೈ.ಕ.ಪ್ರ.ಅ.ಮಂಡಳಿಯಿಂದ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಉಲ್ಲೇಖ:
1) ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 02 ಟಿಎಫ್‌ಪಿ 2010, ದಿನಾಂಕ: 30-04-2010.
2) G.O. No. FD 2 TFP 2016, Bangalore, dated: 20 -01-2016.
3) ಮಂಡಳಿಯ ಆದೇಶ ಸಂಖ್ಯೆ:ಹೈಕಪ್ರಅಮಂ/ಯೋಜನೆ/ಮ್ಯಾಕ್ರೋ/ಬೀದರ/43/2017-18 / 503, ದಿನಾಂಕ: 10-05-2017.
4) ಮಂಡಳಿಯ ಆದೇಶ ಸಂಖ್ಯೆ:ಹೈಕಪ್ರಅಮಂ/ಯೋಶಾ/ಕ್ರಿಯೋ/ ಸಾಮಾನ್ಯ/46/2017-18 /960, ದಿನಾಂಕ: 7/10-07-2017.
5) ಸರ್ಕಾರದ ಆದೇಶ ಸಂಖ್ಯೆ: ಆಇ 03 ಟಿಎಫ್‌ಪಿ 2018, ದಿನಾಂಕ: 14-05-2018.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಮೈಕ್ರೋ ಮತ್ತು ಮ್ಯಾಕ್ರೋ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ (ಸಾಧನ ಸಲಕರಣೆಗಳ ಖರೀದಿಯನ್ನು ಸೇರಿ) ಸಂಬಂಧಿಸಿದಂತೆ ರೂ 1.00 ಕೋಟಿಗಳ ಮೊತ್ತದ ಕಾಮಗಾರಿಗಳಿಗೆ ಉಲ್ಲೇಖ-(1) & (2)ರ ಸಕಾರದ ಆದೇಶದನ್ವಯ, ಹಾಗೂ ಉಲ್ಲೇಖ-(3) & (4)ರಲ್ಲಿ ಮಂಡಳಿಯಿಂದ ಹೊರಡಿಸಲಾದ ಆದೇಶ ಹಾಗೂ ಸುತ್ತೋಲೆಯನ್ವಯ, ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು/ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವ ಅಧಿಕಾರವನ್ನು ಹೊಂದಿರುತ್ತಾರೆ.

ಆದರೆ ಉಲ್ಲೇಖ- (5)ರನ್ವಯ, ಸರ್ಕಾರದಿಂದ ಎಲ್ಲಾ ಇಲಾಖಾ ಮುಖ್ಯಸ್ಥರುಗಳು ಹಾಗೂ ಇನ್ನಿತರ ಇಲಾಖಾ ಅಧಿಕಾರಿಗಳಿಗೆ ಸಾಮಾನ್ಯ ಆರ್ಥಿಕ ಅಧಿಕಾರಗಳನ್ನು ಪರಿಷ್ಕರಿಸಿ ಆದೇಶಿಸಲಾಗಿದೆ. ಸದರಿ ಆದೇಶದನ್ವಯ, ಇಲಾಖಾ ಮುಖ್ಯಸ್ಥರುಗಳಿಗೆ ಒಂದು ಕಾಮಗಾರಿಗೆ ರೂ 2.5 ಕೋಟಿಗಳ ಮೊತ್ತದ ಆಡಳಿತಾತ್ಮಕ ಅನುಮೋದನೆ ನೀಡುವ ಅಧಿಕಾರವನ್ನು ಹೊಂದಿರುತ್ತಾರೆ. ಜಿಲ್ಲಾಧಿಕಾರಿಗಳು ಹಾಗೂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರುಗಳಿಗೆ ಇಲಾಖಾ ಮುಖ್ಯಸ್ಥರೆಂದು ಉಲ್ಲೇಖ-(2)ರ ಆದೇಶದಲ್ಲಿ ಪ್ರಕಟಿಸಲಾಗಿರುತ್ತದೆ.

ಆದ್ದರಿಂದ ಉಲ್ಲೇಖ-(2) ಹಾಗೂ ಉಲ್ಲೇಖ-(5)ರನ್ವಯ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯಕಾರ್ಯನಿವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರುಗಳಿಗೆ ರೂ 2.5 ಕೋಟಿಗಳ ಮೊತ್ತದವರೆಗಿನ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಅಧಿಕಾರವನ್ನು ಹೊಂದಿರುವುದರಿಂದ ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಮೈಕ್ರೋ ಮತ್ತು ಮ್ಯಾಕ್ರೋ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ರೂ 2.5 ಕೋಟಿಗಳ ಮೊತ್ತದವರೆಗಿನ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವುದು. ರೂ 2.5 ಕೋಟಿಗಳ ಮೊತ್ತದ ಮೇಲ್ಪಟ್ಟ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಮಂಡಳಿಗೆ ಸಲ್ಲಿಸುವುದು.

22.8.18
ಕಾರ್ಯದರ್ಶಿಗಳು,
ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ
ಮಂಡಳಿ, ಕಲಬುರಗಿ.

ಇವರಿಗೆ,

1) ಜಿಲ್ಲಾಧಿಕಾರಿಗಳು,
ಬೀದರ/ಕಲಬುರಗಿ/ಕೊಪ್ಪಳ/ರಾಯಚೂರು/ಬಳ್ಳಾರಿ/ಯಾದಗಿರಿ.
2) ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು,
ಬೀದರ/ಕಲಬುರಗಿ/ಕೊಪ್ಪಳ/ರಾಯಚೂರು/ಬಳ್ಳಾರಿ/ಯಾದಗಿರಿ.

ಪ್ರತಿಯನ್ನು:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ಎಲ್ಲಾ ಅನುಷ್ಠಾನಾಧಿಕಾರಿಗಳು, ಹೈ.ಕ.ವಿಭಾಗ, ಇವರಿಗೆ ಸೂಕ್ತಕ್ರಮಕ್ಕಾಗಿ ಕಳುಹಿಸಲಾಗಿದೆ.